ಅ) ಉಡುಪಿ ಜಿಲ್ಲೆಯಲ್ಲಿ ಎಷ್ಟು ಪಾಲಿಕ್ಲಿನಿಕ್‌ಗಳು ಮಂಜೂರಾಗಿದೆ; ಅವು ಎಲ್ಲೆಲ್ಲಿವೆ?

ಆ) ಅವುಗಳಲ್ಲಿ ಎಷ್ಟು ಕಾರ್ಯನಿರ್ವಹಿಸುತ್ತಿವೆ; ಅದರಲ್ಲಿ ಎನೆಲ್ಲ ಸೌಲಭ್ಯಗಳಿವೆ;

ಇ) ಕಾರ್ಕಳದಲ್ಲಿ ಪಾಲಿಕ್ಲಿನಿಕ್ ಕಾರ್ಯ ನಿರ್ವಹಿಸುತ್ತಿರುವುದೇ; ಕಾರ್ಯನಿರ್ವಹಿಸದಿದ್ದಲ್ಲಿ ಕಾರಣವೇನು?

ಶ್ರೀ ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಒಂದು ಕಾರ್ಕಳ

ಆ) ಒಂದು ಕಾರ್ಯನಿರ್ವಹಿಸುತ್ತಿವೆ. ಆದರೆ ಇನ್ನೂ ಕೆಲವೊಂದು ಸೌಕರ್ಯಗಳ ಅವಶ್ಯಕತೆ ಇದೆ.

ಇ) – ಕಾರ್ಯನಿರ್ವಹಿಸುತ್ತಿದೆ

ಬೀದರ್ ಜಿಲ್ಲೆಯ ಕೈಗಾರಿಕೆಗಳ ಬಗ್ಗೆ

4163 (4906) : ಶ್ರೀ ಗುಂಡಪ್ಪ ವಕೀಲ (ಔರಾದ್) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲಾ ಕೇಂದ್ರದಲ್ಲಿ No Industry Scheme ನಲ್ಲಿ ಹಾಗೂ ರಾಜ್ಯ ಸರ್ಕಾರದ Subsidy Scheme ನಲ್ಲಿ ಸ್ಥಾಪನೆಗೊಂಡ ಕೈಗಾರಿಕೆಗಳೆಷ್ಟು?

ಆ) ಅಂತಹ ಕೈಗಾರಿಕೆಗಳಿಗೆ ಕೇಂದ್ರದಿಂದ ಹಾಗೂ ರಾಜ್ಯದಿಂದ ಕೊಡಲಾದ ಸಬ್ಸಿಡಿ ಎಷ್ಟು;

ಇ) ಈಗ ಸಧ್ಯ ಎಷ್ಟು ಕೈಗಾರಿಕೆಗಳು ಚಾಲನೆಯಲ್ಲಿವೆ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ದಿನಾಂಕ: 1.04.83 ರಿಂದ ಸುಮಾರು 1734 ಕೈಗಾರಿಕಾ ಘಟಕಗಳನ್ನು ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ.

ಆ) ರೂ. 783.45 ಲಕ್ಷಗಳ ಸಹಾಯಧನವನ್ನು 864 ಘಟಕಗಳಿಗೆ ಕೇಂದ್ರ ಸರ್ಕಾರದಿಂದ ನೀಡಲಾಗಿದೆ. ಹಾಗೂ 870 ಘಟಕಗಳಿಗೆ ರೂ. 1646.43 ಲಕ್ಷಗಳ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ನೀಡಲಾಗಿದೆ.

ಇ) ಪ್ರಸ್ತುತ 509 ಕೈಗಾರಿಕಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಪಶುಗಳ ಆಸ್ಪತ್ರೆ ಕಟ್ಟಡಗಳ ಬಗ್ಗೆ

4164 (4907) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿರುವ ಪಶುಚಿಕಿತ್ಸಾಲಯ ಕೇಂದ್ರಗಳೆಷ್ಟು; ಮತ್ತು ಅಂತಹ ಕೇಂದ್ರಗಳಿಗೆ ತನ್ನದೇ ಆದ ಆಸ್ಪತ್ರೆ ಕಟ್ಟಡಗಳ ವ್ಯವಸ್ಥೆ ಇದೆಯೇ;

ಆ) ಈ ಎಲ್ಲಾ ಕೇಂದ್ರಗಳಲ್ಲಿ ಬೇಕಾಗಿರುವ ಸಿಬ್ಬಂದಿ ವಿವರಗಳೇನು;

ಇ) ಹಾಲಿ ಸಿಬ್ಬಂದಿ ಕೊರತೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಒಟ್ಟು 9 ಪಶುಚಿಕಿತ್ಸಾಲಯಗಳಿವೆ ಈ ಒಂಬತ್ತು ಪಶುಚಿಕಿತ್ಸಾಲಯಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ.